## ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭದ್ರಾವತಿ

ಸಿ. ಸಿ. ಸಂಖ್ಯೆಃ 313/2025

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರು** |
|---|---|---|
| ಸರ್ಕಾರದ ಪರವಾಗಿ,<br>ಗ್ರಾಮಾಂತರ ಪೊಲೀಸ್ ಠಾಣೆ,<br>ಭದ್ರಾವತಿ | | ಶ್ರೀ ಏಳುಕೋಟಿ |

**:: ದೋಷಾರೋಪಣೆ ::**

**ಶ್ರೀ. ಟಿ. ಶ್ರೀಕಾಂತ್, ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಭದ್ರಾವತಿ, ಅದ ನಾನು ನಿಮ್ಮ ಮೇಲೆ ಅಂದರೆಃ**

ಶ್ರೀ ಏಳುಕೋಟಿ ಬಿನ್ ಕುಮಾರ್ ಶೆಟ್ಟಿ,
ವಯಸ್ಸು 24 ವರ್ಷ,
ವಾಸಃ ಕೂಡ್ಲಿಗೆರೆ ಗ್ರಾಮ,
ಭದ್ರಾವತಿ ತಾಲ್ಲೂಕು.

**ಈ ಕೆಳಗಿನಂತೆ ದೋಷಾರೋಪಣೆ ಹೊರಸಿದ್ದೇನೆಃ-**

ಮೊದಲನೆಯದಾಗಿ, ದಿನಾಂಕ 20/05/2024 ರಂದು, ಭದ್ರಾವತಿ ತಾಲ್ಲೂಕು, ಕೂಡ್ಲಿಗೆರೆ ಗ್ರಾಮದ, ಕುಮಾರ ಶೆಟ್ಟರ ಕೊಟ್ಟಿಗೆ ಮನೆಯ ಪಕ್ಕದಲ್ಲಿ ಆರೋಪಿಯಾದ ನೀವು ಒಂದು ಬತ್ತದ ಒಣ ಹುಲ್ಲಿನ ಬಣವೆಯಲ್ಲಿ ಕಾಡಿನ ಜಿಂಕೆಯ ಕೊಂಬುಗಳನ್ನು ಅಕ್ರಮವಾಗಿ ಮಾರಾಟ ಮಾಡುವ ಸಲುವಾಗಿ ಟಾರ್ಪಲಿನಿಂದ ಮುಚ್ಚಿ ಇಟ್ಟುಕೊಂಡಿರುತ್ತೀರಿ ಎಂದು, ಆ ಮೂಲಕ ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಕಲಂ 9, 39(ಬಿ), 44, 49, 49(ಬಿ) ಸಹ ಕಲಂ 51

ನೇ ವಿಧಿಯನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೇಲಿನ ಆರೋಪಕ್ಕೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ಪ್ರಶ್ನೆ.1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು ನಿಮಗೆ ಅರ್ಥವಾಗಿದೆಯೇ?
ಉತ್ತರಃ

ಪ್ರಶ್ನೆ.2: ನೀವು ಆರೋಪಗಳನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಚಿಸುತ್ತಿರೋ.?
ಉತ್ತರಃ

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ

(ಟಿ.ಶ್ರೀಕಾಂತ್)
ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು ಭದ್ರಾವತಿ.